**ದಿನಾಂಕ 20-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು - ವಾದಿಯರ ಪರ ಪಿ ಎನ್ ಪಿ ಕೆ ಆರ್ ವಕೀಲರಿಂದಃ**

ವಾದಿ ಏನು ಸಾದನೆ ಮಾಡುತ್ತಿದ್ದಾನೆ ಎಂದು ನಾನು ಓದಿ ತಿಳಿದುಕೊಂಡಿದ್ದೇನೆ. ಕರಾರಿನ ಮುಖ್ಯ ಅಂಶ ಏನು ಎಂದರೆ ಕಟ್ಟಡದಲ್ಲಿರುವ ಸ್ವಾದೀನದಲ್ಲಿರುವ ವ್ಯಕ್ತಿ ಗಳನ್ನು ಖಾಲಿ ಮಾಡಿಸಿ ಕ್ರಯ ಪತ್ರ ಬರೆದುಕೊಡಬೇಕು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಬಾಡಿಗೆದಾರರನ್ನು ಕೂಡ ಕರಾರು ಬರೆಯಿಸಿಕೊಂಡು ಖಾಲಿ ಮಾಡಿಸಬೇಕು. ಬಾಡಿಗೆದಾರನ್ನು ಖಾಲಿ ಮಾಡಿಸಿ ಕೇಳಿ ನಾನೇ ಹಾಕಿದ್ದೆ ಎಂದರೆ ಸರಿಯಲ್ಲ. ಕರಾರು ಆಗುವಾಗ ಕೇಳಿ ವಿಚಾರಣೆಗೆ ಬಾಕಿ ಇತ್ತು ಎಂದರೆ ಸರಿ. ಅದನ್ನು ನಾನು ವಾದಿಗೆ ತಿಳಿಸಿದ್ದೇನೆ . ಸಾಕ್ಷಿ ಮುಂದುವರೆದು ಅಗ್ರಿಮೆಂಟ್ ನಲ್ಲಿ ಕೇಸ್ ಇರುವ ಬಗ್ಗೆ ತಿಳಿಸಿರುತ್ತೇನೆ ಎಂದು ಹೇಳುತ್ತಾರೆ. ಬಾಡಗೆದಾರರು ಎಷ್ಟು ದಿನಗಳ ಒಳಗಾಗಿ ಒಕ್ಕಲೆಬ್ಬಿಸಬೇಕೆಂದು ನಮ್ಮ ನಡುವೆ ಮಾತುಕತೆ ಆಗಿಲ್ಲ. ಖಾಲಿ ಮಾಡಿಸದೆ ನೊಂದಾವಣೆ ಕ್ರಯ ಆಗುವುದಿಲ್ಲ ಎಂದು ನಮ್ಮ ನಡುವೆ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ . ಬಾಡಿಗೆದಾರರನ್ನು ಎಷ್ಟು ದಿನಗಳ ಒಳಗಾಗಿ ಖಾಲ ಮಾಡಬೇಕೆಂದು ನಮ್ಮ ನಡುವೆ ತೀರ್ಮಾಣವಾಗಿಲ್ಲ . ಖಾಲಿ ಮಾಡಿಸಲು ನ್ಯಾಯಾಲಯದಲ್ಲಿ ಪ್ರಕರಣ ಇದ್ದುದರಿಂದ ತಡವಾಯಿತು. ನ್ಯಾಯಲಯದ ವಿಚಾರಣೆ ತಡವಾಗಲು ನಾನೇ ಕಾರಣ ಎಂದರೆ ಸರಿಯಲ್ಲ.

ಕರಾರಿನ ಮುಖ್ಯ ಅಂಶಗಳನ್ನು ನಾನೇ ಖಾಲಿ ಮಾಡಿಸದೇ ಕಾಲಹರಣ ಮಾಡುತ್ತಿದ್ದೇ ಎಂದರೆ ಸರಿಯಲ್ಲ. ವಾದಿ ಕ್ರಯ ಪತ್ರ ಬರೆಯಿಸಿಕೊಳ್ಳಲು ಹಣ ಇರಲಿಲ್ಲ. ಆದ್ದರಿಂದ ಅವರು ಕ್ರಯ ಪತ್ರ ಬರೆಯಿಸಿಕೊಳ್ಳಲಿಲ್ಲ. ಅಡ್ವಾನ್ಸ ಹಣ ಕೊಟ್ಟಿಲ್ಲ ಎಂದು ಫೋನ್ ಮಾಡಿ ಕೇಳಿದೆ. ದಿಃ 22.12.2008 ರಂದು ನಾನು ಅಡ್ವಾನ್ಸ ಹಣ ಕೊಡುವಂತೆ ಕೇಳಿ, ಆಗ ಅವರು ಈಗ ನನ್ನ ಬಳಿ ಹಣ ಇಲ್ಲ ಎಂದು ಹೇಳಿದರು. ನಾನು 4 ತಿಂಗಳ ಕಾಲ ಕಾದೆ. ನಂತರ ಮಾತುಕತೆ ಮಾಡಲಿಲ್ಲ ನೋಟಿಸ್ ಕಳುಹಿಸಿದೆ, ಕರಾರು ಮಾಡಿಕೊಳ್ಳುವಾಗ ಹಣ ಇತ್ತೋ ಇಲ್ಲವೋ ಗೊತ್ತಿಲ್ಲ . ಕರಾರು ಮಾಡು ಮೊದಲಾಗಲಿ ನಂತರದಲ್ಲಾಗಲಿ ವಾದಿಯ ಆರ್ಥಿಕತೆಯ ಬಗ್ಗೆ ತಿಳಿದುಕೊಂಡಿಲ್ಲ. ವಾದಿಗೆ ಹಣದ ಸಾಮರ್ಥ್ಯ ಇಲ್ಲ ಎನ್ನುವ ಬಗ್ಗೆ ಬಳಿ ದಾಖಲೆ ಇಲ್ಲ. ದಾವೆ ಮಾಡುವ ಮೊದಲು ವಾದಿಯು ಕ್ರಯ ಪತ್ರ ಮಾಡಸಿಕೊಡಿ ನಾವೇ ಖಾಲಿ ಮಾಡಿಸುತ್ತೇವೆ ಎಂದು ಹೇಳಿದ್ದರು ಎಂದರೆ ಸರಿ.

ದಿಃ 07.02.2009 ರವರೆಗೆ ವಾದಿಯವರಿಗೆ ನೊಂದಾಣಿ ಕ್ರಯ ಮಡಡಿಕೊಡುವುದಕ್ಕಾಗಿ ಒಪ್ಪಿದೆ. ತದನಂತರ ಕ್ರಯ ಮಾಡಿಕೊಡಲು ಆಗುವುದಿಲ್ಲ ಎಂದು ನೋಟಿಸ್ ಕೊಟಿದ್ದೀರಾ ಎಂದರೇ ಸಾಕ್ಷಿ ನೋಟಿಸ್ ಕೊಟ್ಟಿಲ್ಲ ಎಂದು ಹೇಳುತ್ತಾರೆ . ಸದರಿ ನೋಟಿಸ್ ನನ್ನ ಬಳಿ ಇರುತ್ತದೆ. ವ್ಯಾಜ್ಯ ಮಾಡುವವರೆಗೆ ವಕ್ಕಲೆಬ್ಬಿಸಿಲಿಲ್ಲ ಎಂದು ಕರಾರು ಮುಂದೂಡುತ್ತಾ ಹೋಗಿದೆ ಎಂದರೆ ಸರಿಯಲ್ಲ. ಅಡ್ವಾನ್ಸ ಕೊಡಿ ಎಂದು ನಾನು ಕೇಳಿಲ್ಲ ಎಂದರೆ ಸರಿಯಲ್ಲ . ಕರಾರು ಮುಂದು ವೆರೆದು ಕೊಂಡು ಹೋಗಿದ್ದ ಎಂದರೆ ಸರಿಯಲ್ಲ. ವಾದಿ ಕರಾರಿನ ಸಂಪೂರ್ಣ ಷರತ್ತುನ್ನು

ಪಾಲಿಸಿದ್ದಾರೆ ಎಂದರೆ ಸರಿಯಲ್ಲ. ಕರಾರಿನ 3 ನೇ ಷರತ್ತಿನಲ್ಲಿ ಕೊಡಬೇಕಾದ ಎಲ್ಲಾ ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಕರಾರಿನ ಸಾಕ್ಷದಾರ ಗುರುದಾಸ ಶೆಣೈ ನನಗೆ ಪರಿಚಯ ಇಲ್ಲ. ಕರಾರಿಗೆ ಸಾಕ್ಷಿ ಯಾಗಿ ಬನ್ನಿ ಎಂದು ನಾನು ಹೇಳಿಲ್ಲ. ಅವರನ್ನು ನಾನು ಇಲ್ಲಿಯವರೆಗೂ ಬೇಟಿಯಾಗಿಲ್ಲ. ಅವರು ಎಲ್ಲಿಯವರು ಎಂದು ನಾನು ಇಲ್ಲಿಯವರೆಗೂ ವಿಚಾರಿಸಿಲ್ಲ. ಗುರುದಾಸ ಶೆಣೈ ರವರನ್ನು ನಾನೇ ಸಾಕ್ಷಿಯಾಗಿ ಕರೆತಂದಿದ್ದೆ ಎಂದರೆ ಸರಿಯಲ್ಲ. ಗುರುದಾಸ ಶೆಣೈ ನ್ಯಾಯಲಯದ ಮುಂದೆ ಸಾಕ್ಷಿಯಾಗಿ ಸಾಕ್ಷ ನುಡಿದಿರುವದು ನನಗೆ ಗೊತ್ತು. ಅವರು ನುಡಿದ ಸಾಕ್ಷವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಅವರು ನುಡಿದಿರುವ ಸಾಕ್ಷ ಸರಿಯಿಲ್ಲ. ಕರಾರಿನ ಎಲ್ಲಾ ವಿಷಯವನ್ನು ಅವರು ಸರಿಯಾಗಿ ಹೇಳಿಲ್ಲ ನಾನು ಮಂಗಡ ಪಡೆದಿರುವುದಾಗಿ ತಿಳಿಸಿರುತ್ತಾರೆ ಆದರೆ ಅದು ಸರಿಯಿಲ್ಲ.

ಗೋಪಾಲ ರವರು ಸಾಕ್ಷಿಯಾಗಿರುವ ಬಗ್ಗೆ ನನಗೆ ಗೊತ್ತು. ಆದರೆ ಅವರ ಪರಿಚಯ ಇಲ್ಲ. ಕರಾರನ್ನು ಗೋಪಾಲ ರವರು ತಯಾರಿ ಮಾಡಿದ್ದು ಎಂದು ನನಗೆ ಗೊತಿಲ್ಲ. ಕರಾರನ್ನು ಯಾರು ತಯಾರು ಮಾಡಿದರು ಎಂದು ನನಗೆ ಗೊತ್ತಿಲ್ಲ. ಗೋಪಾಲರವರು ನ್ಯಾಯಲಯದ ನಿವೃತ್ತ ಶಿರಸ್ತೇದಾರರು ಎಂದು ನನಗೆ ಗೊತಿಲ್ಲ. ಗೋಪಾಲ ರವರು ನ್ಯಾಯಾಲಾಯಕ್ಕೆ ಕೊಟ್ಟ ಪ್ರಮಾಣ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಗೋಪಾಲ ರವರಿಂದ ಕರಾರು ತಯಾರಿಸಿ ನಾನೇ ಸಹಿ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ಗುರುದಾಸ ಶೆಣೈ ಮತ್ತು ಗೋಪಾಲ ಮತ್ತು ನನ್ನ ನಡುವೆ ಯಾವುದೇ ದ್ವೇಷ ಇಲ್ಲ ಅವರು ನನಗೆ ಮೋಸ ಮಾಡಿಲ್ಲ. ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ನಿಪಿ 2 ಮತ್ತು 14 ರ ಬಗ್ಗೆ ನಾನು ತಿಳಿದುಕೊಂಡಿಲ್ಲ, ನಿಪಿ 14 ರ ಅಡಿಯಲ್ಲಿ ನಾನು 1 ಲಕ್ಷ ಹಣ ಪಡೆದಿದ್ದೇನೇ ಎಂದರೆ ಸರಿ. ಅದಕ್ಷ ಸಾಕ್ಷಿಯಾಗಿ ಗುರುದಾಸ ಮತತ ಗೋಪಾಲ ಸಹಿ ಮಾಡಿರುತ್ತಾರೆ ಎಂದರೆ ಸರಿ. ದಿಃ 10.12.2008 ಕ್ಕೆ ನಿಪಿ 2 ರಂತೆ 4 ಲಕ್ಷ ರೂ ನಾನು ಪಡೆದಿದ್ದೇನೆ ಎಂದರೆ ಸರಯಿಲ್ಲ, ನಿಪಿ 2 ರಲ್ಲಿರುವ ಸಹಿ ನನ್ನದೆ ಎಂದರೆ ಸರಿಯಿಲ್ಲ. ಗುರುದಾಸ ಶೆಣೈ ಮತ್ತು ಗೋಪಾಲರವರು ರೂ 4 ಲಕ್ಷ ರೂ ಗಳನ್ನು ನನಗೆ ಕೊಡುವಾಗ ಹಾಜರಿದ್ದು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 20.12.2008 ಕ್ಕೆ ನಿಪಿ3 ರಂತೆ ನನಗೆ 5 ಲಕ್ಷ ರೂಗಳನ್ನು ವಾದಿ ಪಾವತಿಸಿ ರಶೀದಿಯನ್ನು ನನ್ನಿಂದ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಶೀದಿಗೆ ಗುರುದಾಸ ಶೆಣೈ ಮತ್ತು ಗೋಪಾಲ ಕೋಕ್ಕಂಜೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾ ಎಂದರೆ ಸರಿಯಲ್ಲ. ನಿಪಿ 3 ರಲ್ಲಿರುವ ಸಹಿ ನನ್ನದು ಎಂದರೆ ಸರಿಯಲ್ಲ. ನನಗೆ 5 ಲಕ್ಷ ಮತ್ತ 4 ಲಕ್ಷ ಹಣ ಪಾವತಿ ಯಾಗಿಲ್ಲ. ನಿಪಿ 2 ಮತ್ತು 3 ರಲ್ಲಿರುವ ಸಹಿ ನನ್ನದಲ್ಲ. ಸದರಿ ಸಹಿ ನನ್ನ ಸಹಿಯ ರೀತಿ ಇಲ್ಲ. ಸದರಿ 2 ರಶೀದಿಯನ್ನು ಈ ದಿನವೇ ನೋಡುತಿದ್ದೇನೆ . 2 ರಶೀದಿಗಳನ್ನು ನಾನು ಒಪ್ಪುವುದಿಲ್ಲ. ಸದರಿ ಸಹಿಗಳನ್ನು ಫೋರ್ಜರಿ ಮಾಡಿರುತ್ತಾರೆ ಎಂದು ವಾದಿಯವರ ಮೇಲೆ ಸಂಶಯ ಇದೆ. ಸದರಿ ಸಹಿಗಳನ್ನು ಫೋರ್ಜರಿ ಮಾಡಿರುತ್ತಾರೆ ಎಂದು 2014 ರಲ್ಲಿ ಗೊತ್ತಾಯಿತು. ನಾನು ವಾದಿಯ ವಿರುದ್ದ ಸಹಿ ಫೋರ್ಜರಿ

ಮಾಡಿರುವ ಬಗ್ಗೆ ಕಾನೂನು ಕ್ರಮ ಕೈಗೊಂಡಿರುತ್ತೇನೆ. ಕಾರ್ಕಳ ನ್ಯಾಯಾಲಯದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ. ನಾನು ಹಾಕಿದ್ದ ಕೇಸು ಮುಗಿದು ಹೋಯಿತು ಕಾರಣ ಆ ಸಮಯದಲ್ಲಿ ನನ್ನ ಯಜಮಾನರು ತೀರಿಕೊಂಡಿದ್ದರು. ಕಾರ್ಕಳ ನ್ಯಾಯಾಲಯದಲ್ಲಿ ಕಾನೂನು ಕ್ರಮ ತೆಗೆದುಕೊಂಡ ಬಗ್ಗೆ ದಾಖಲಾತಿ ಇದೆ.

ಷರತ್ತಿನ ಪ್ರಕಾರ ನನಗೆ ಕೊಡಬೇಕಾದ ಹಣವನ್ನು ಅವರು ಸಂಪೂರ್ಣವಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅವರಿಂದ ಸಂಪೂರ್ಣವಾಗಿ ಪಡೆದು ಅವರಿಗೆ ಮೋಸ ಮಾಡುವ ಉದ್ದೇಶದಿಂದ ಹಣ ಬಂದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಸರಿಯಲ್ಲ. ವಾದಿ ತನ್ನ ಕರ್ತವ್ಯವನ್ನು ಪಾಲಿಸಿದ್ದರು ಕೂಡ ನಾನು ದುರುದ್ದೇಶ ಪೂರ್ವಕವಾಗಿ ವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಕಡೆಯಿಂದ ಲೋಪ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ನೊಂದಾಯಿತ ಕ್ರಯ ಪತ್ರವನ್ನು ಬರೆದುಕೊಡಲು ನಾನು ಬಾದ್ಯಸ್ಥರು ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.